CC2118/23 PW5

ದಿನಾಂಕ 13.05.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎಸ್ ಕೆ ಎಸ್ ವಕೀಲರಿಂದ:

ಮೃತ ಮಂಜುನಾಥ ಶೆಟ್ಟಿಯವರು ನನಗೆ ಸುಮಾರು 15 ವರ್ಷದಿಂದ ಪರಿಚಯ. ಅವರು ಸಮಾಜ ಸೇವೆಯನ್ನು ಮಾಡುತ್ತಿದ್ದರು. ನಾನು ಅವರೊಟ್ಟಿಗೆ ಸಮಾಜಸೇವೆಯನ್ನು ಮಾಡುತ್ತಿದ್ದೆ. ಅವರು ನನ್ನ ಆತ್ಮೀಯರಾಗಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದ ಅಪಘಾತ ನಿಟ್ಟೆ ಕೆ ಇ ಬಿ ಕಚೇರಿಯ ಎದುರಿನಲ್ಲಿ ಆಗಿರುತ್ತದೆ. ಘಟನಾ ಸ್ಥಳದಿಂದ ಕೆ ಇ ಬಿ ಕಚೇರಿಗೆ 10 ಅಡಿ ದೂರ ಇದೆ. ಸದ್ರಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಅಲ್ಲಿ ಸುಮಾರು ವಾಹನ ಸಂಚಾರ ಇರುತ್ತದೆ. ರಸ್ತೆಯ 2 ಬದಿಯಲ್ಲಿ ಬಿಳಿ ಬಣ್ಣದ ಪಟ್ಟಿಯನ್ನು ಹಾಕಿರುತ್ತಾರೆ. ರಸ್ತೆಯ ನಡುವಿನಲ್ಲಿಯೂ ಸಹ ಬಿಳಿ ಬಣ್ಣದ ಪಟ್ಟಿಯನ್ನು ಹಾಕಿರುತ್ತಾರೆ. ಅಪಘಾತ ಸ್ಥಳದಲ್ಲಿ ಯೂ ಟರ್ನ್ ಸೈನ್ ಬೋರ್ಡ್ ಇರುವ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಮನೆ ಅಪಘಾತ ಸ್ಥಳದಿಂದ 2-3 ಕಿ ಮೀ ದೂರ ಇದೆ. ಅಪಘಾತ ಸ್ಥಳದ ಹತ್ತಿರ ಖಾಸಗಿ ಆಸ್ಪತ್ರೆ ಇದೆ ಎಂದರೆ ಸರಿ. ಅಲ್ಲಿ ತುಂಬಾ ಮನೆಗಳು ಸಹ ಇದೆ. ಅಲ್ಲಿ ಗೌರವಾನ್ವಿತ ವ್ಯಕ್ತಿಗಳು ವಾಸವಾಗಿದ್ದಾರೆ ಎಂದರೆ ಸರಿ. ನನಗೆ ಅಲ್ಲಿಗೆ ಬರಲು ಯಾರು ಸಹ ಹೇಳಿರುವುದಿಲ್ಲ, ಅಪಘಾತವಾಗಿದೆ ಎಂದು ತಿಳಿದ ಕೂಡಲೇ ಹೋಗಿರುತ್ತೇನೆ.

ಆಗ ಪೊಲೀಸರು ಅಲ್ಲಿ ಇದ್ದರು. ನಾನು ಅಲ್ಲಿಗೆ ಹೋಗುವಾಗ ಪೊಲೀಸರು ದಾಖಲೆಗಳನ್ನು ಮಾಡಿದ್ದರು. ಪೊಲೀಸರು ದಾಖಲೆಗಳನ್ನು ಪೆನ್ನಿನಲ್ಲಿ ಬರೆದಿರುತ್ತಾರೆ. ಅಲ್ಲಿ ಭಾವಚಿತ್ರವನ್ನು ಪೊಲೀಸರು ಅವರ ಮೊಬೈಲ್ ನಲ್ಲಿ ತೆಗೆದಿರುತ್ತಾರೆ. ಅಪಘಾತ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ. ಅಪಘಾತವಾದ ಸುಮಾರು ಅರ್ಧ ಗಂಟೆಯ ಒಳಗೆ ಹೋರುತ್ತೇನೆ. ಸದ್ರಿ ವಾಹನದ ಬಿಡಿ ಭಾಗಗಳು ಅಲ್ಲಿಯೇ ಇದ್ದವು. ಬ್ರೇಕ್ ಮಾರ್ಕ್ ಇದ್ದ ಬಗ್ಗೆ ಗಮನಿಸಿರುವುದಿಲ್ಲ. ಅಲ್ಲಿ ರಕ್ತ ಬಿದ್ದಿರುವುದನ್ನು ನಾನು ನೋಡಿರುವುದಿಲ್ಲ. ಸದ್ರಿ ಕಾರು ರಾಂಗ್ ಸೈಡ್ ನಲ್ಲಿ ಇದ್ದು ನಿಟ್ಟೆ ಕಾಲೆಜಿಗೆ ಹೋಗುವ ದಾರಿಯಲ್ಲಿ ನಿಂತಿತ್ತು. ಸ್ಕೂಟಿ ಬಿದ್ದಿತ್ತು , ಹೆಲ್ಮೆಟ್ ತೋಡಿನಲ್ಲಿ ಬಿದ್ದಿತ್ತು. ಪಂಚನಾಮೆ

ಆದ ನಂತರ ಪೊಲೀಸರು ಕಾರನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತಾರೆ. ಸ್ಕೂಟಿಯನ್ನು ತೆಗೆದುಕೊಂಡು ಹೋಗಿದ್ದಾರೊ ಇಲ್ಲವೊ ಎಂದು ಗೊತ್ತಿಲ್ಲ. ಆರೋಪಿ ಅಲ್ಲಿ ಇದ್ದಾರೊ ಇಲ್ಲವೊ ಎಂದು ನಾನು ಗಮನಿಸಿರುವುದಿಲ್ಲ.

ಕೆ ಇ ಬಿ ಕಚೇರಿಗೆ ನಾನು ಹೋಗಿರುತ್ತೇನೆ. ಕೆಇ ಬಿ ಕಚೇರಿಯಲ್ಲಿ ಸಿಸಿ ಟಿವಿ ಕ್ಯಾಮೇರಾ ಇದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ಕಾರು ಬೂದು ಬಣ್ಣದ್ದು ಎಂದರೆ ಗ್ರೇ ಕಲರ್ ಎಂದು ಮತ್ತು ಅದು ವ್ಯಾಗನರ್ ಕಾರು ಎಂದು ನುಡಿಯುತ್ತಾರೆ. ನಿಪಿ-5 ಫೋಟೊವನ್ನು ನಾನು ನೋಡಿದ್ದು ಅದರಲ್ಲಿರುವ ಕಾರು ಬ್ರೌನ್ ಕಲರ್ ಎಂದರೆ ಘಟನೆ ನಡೆದು 2 ವರ್ಷದ ಮೇಲೆ ಕಳೆದಿದೆ ಹಾಗಾಗಿ ನನಗೆ ಬಣ್ಣವನ್ನು ಸರಿಯಾಗಿ ಹೇಳಲು ಆಗುವುದಿಲ್ಲ.

ಮೃತ ಮಂಜುನಾಥ ಶೆಟ್ಟಿಯವರ ಹಂಡತಿ ಮತ್ತು ಮಕ್ಕಳು ಪರಿಹಾರ ಕೋರಿ ಮೋಟಾರು ವೆಹಿಕಲ್ ಟ್ರಿಬ್ಯೂನಲ್ ನಲ್ಲಿ ಕೇಳಿರುತ್ತಾರೆ ಎಂದರೆ ಹೋಗಿರಬಹುದು. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ